ಆದರೆ – ಬದುಕು ಬಣ್ಣದ ಕನಸು ಕಂಡಷ್ಟು ಸುಲಭವಲ್ಲ. ಅಪ್ಪನ ಕಥೆ ಕೇಳುತ್ತ ತೇಲಿ, ನಿದ್ದೆ ಹೋಗಿಬಿಡುತ್ತಿದ್ದಷ್ಟು ಸರಾಗವಲ್ಲ. ಎಳೆ ವಯಸ್ಸಿನ ಕಣ್ಣಾಮುಚ್ಚಾಲೆಯಷ್ಟು ಸುಗಮವಲ್ಲ. ಅಲ್ಲಿ ಗುಮ್ಮನ ಹಾಗೆ ಅಭಿನಯಿಸುತ್ತಿದ್ದರಷ್ಟೇ ನಾನವರನ್ನು ಹುಡುಕಬೇಕಾಗುತ್ತಿತ್ತಷ್ಟೇ. ಆದರೆ ನಿಜ ಪ್ರಪಂಚದಲ್ಲಿ ಎಲ್ಲರೂ ನಿಜವಾಗಿಯೂ ಗುಮ್ಮರಾಗಿದ್ದರು. ಒಳ್ಳೆಯವರೆಂದು ಅಭಿನಯಿಸುತ್ತಿದ್ದರು. ಇಲ್ಲಿ ಒಳ್ಳೆಯವರನ್ನು ಹುಡುಕಿ ತೆಗೆಯುವ ಕಷ್ಟಸಾಧ್ಯ. ಆಟದಲ್ಲಿ ಕಣ್ಣು ಕಟ್ಟುತ್ತಿದ್ದರು. ದಿನ ಕಳೆದಂತೆ ಕಾಲ ಮೊನಚಾಗಿ ಕಠೋರವಾಗುತ್ತಿತ್ತು. ಬೆಳೆಸಿದ ಕನಸುಗಳ ಬಳ್ಳಿಯನ್ನು ಮಲ್ಲಿಗೆ ಮೊಗ್ಗನ್ನು ಎಳೆ ಎಳೆಯಾಗಿ ಕೊಚ್ಚುತ್ತ ಬರುತ್ತದೆ. ಬದುಕು ಅಭದ್ರವಾಗಿ, ಕನಸು ಛಿದ್ರವಾಗುತ್ತದೆ.

ನಾನು ಎಷ್ಟೋ ರಾತ್ರಿಗಳನ್ನು ಚುಕ್ಕೆ ಎಣಿಸುತ್ತ 'ಸ್ವರ'ದೊಂದಿಗೆ ತಾರಕಸುಖ ಅನುಭವಿಸುತ್ತ ಉಪ್ಪರಿಗೆಯ ಮಂಚದ ಮೇಲೆ, ಹೊಲದ ತೆನೆಗಳ ನಡುವೆ, ಅಪ್ಪನ ಪುಸ್ತಕ ತುಂಬಿದ ಕೋಣೆಯಲ್ಲಿ ಓದುತ್ತ ಕಳೆದೆನೊ. ಅದೇ ದಿನಗಳಲ್ಲಿ ಯಾಕೋ ಬರೆಯಬೇಕನಿಸಿ 'ಮಿಲನ' ಎನ್ನುವ ಕಥೆಯನ್ನು ನಾನು ಬರೆದಿದ್ದು. ಅದೆಲ್ಲೋ ಪ್ರಕಟವೂ ಆಯಿತು. ಹಳ್ಳಿಗಾಡಿನ ಬದುಕನ್ನು, ಅಲ್ಲಿನ ಮೌಢ್ಯಕ್ಕೆ ತುತ್ತಾಗುವ ಜೋಡಿಯೊಂದನ್ನು ನಾನು ಆ ಕತೆಯಲ್ಲಿ ಚಿತ್ರಿಸಿದ್ದೆ. ನನ್ನ ಬರವಣಿಗೆಗೆ ಪ್ರೋತ್ಸಾಹ ನೀಡಿದ್ದೂ ಕೂಡ ಅಪ್ಪನೆ. ನನ್ನ ಮೊದಲ ಕಥೆ ಓದಿ ತಿದ್ದಲು, ಕೆಲವು ಪಾತ್ರಗಳನ್ನು ಬದಲಿಸಲು ಸೂಚನೆ ಕೊಟ್ಟಿದ್ದು ಸಹ ಅವನೆ. ಆ ಕಥೆ ಪ್ರಕಟವಾದ ಮೇಲೆ ನಾನು ಇದ್ದಕ್ಕಿದ್ದಂತೆ ಪ್ರಸಿದ್ಧಳಾಗಿಬಿಟ್ಟೆ. ಎಷ್ಟೋ ಜನರ ಪತ್ರಗಳು ನಮ್ಮ ಮನೆಗೆ ಬರತೊಡಗಿದವು. ಹಲವರು ಹೊಗಳಿ ಬರೆದರೆ, ಇನ್ನೂ ಕೆಲವರು ರೋಷದಿಂದ ಬರೆಯುತ್ತಿದ್ದರು. ಆದರೆ ಕೋಪದಿಂದ ಬರೆದವರಿಗೂ ಸಹ 'ಮಿಲನ' ಕಥೆಯ ಅಂತ್ಯ ತುಂಬ ಇಷ್ಟವಾದಂತಿತ್ತು. ಎಂಥವರೂ ಆ ಕಥೆಯ 'ಜೀವಾ' ಎನ್ನುವ ಹುಡುಗಿಯ ಪಾತ್ರಕ್ಕೆ ಮಿಡಿಯುತ್ತಿದ್ದರು. ವಿಫಲ ಪ್ರೇಮಿಯಾದ ಕಥಾನಾಯಕ ರೋಸಿ, ಹಳ್ಳಿ ಬಿಟ್ಟುಹೋಗಿ, ಎಷ್ಟೋ ವರ್ಷಗಳ ನಂತರ ಮತ್ತೆ ಹಳ್ಳಿಗೆ ಮರಳಿರುತ್ತಾನೆ. ಏನೆಲ್ಲ ಬದಲಾಗಿ ಚಿಕ್ಕಹಳ್ಳಿ ಪಟ್ಟಣದ ಪ್ರತಿರೂಪದಂತೆ ಮಾರ್ಪಟ್ಟದ್ದು ಕಂಡು ಮತ್ತೆ ಪಟ್ಟಣಕ್ಕೇ ಮರಳಲು ನಿರ್ಧರಿಸುತ್ತಾನೆ. ಆದರೆ ಹೋಗುವ ಮೊದಲು ತಾನು ಮೊದಲೆಲ್ಲ ತನ್ನ ಪ್ರೇಮಿಯನ್ನು ಸಂಧಿಸುತ್ತಿದ್ದ ದೊಡ್ಡ ಬೇವಿನಮರ ನೋಡುವ ಮನಸ್ಸಾಗಿ ಅಲ್ಲಿಗೆ ಹೋಗುತ್ತಾನೆ. ಊರೆಲ್ಲ ಬದಲಾಗಿದ್ದರೂ ಆ ಬೇವಿನಮರ ಮಾತ್ರ ಹಿಂದಿನ ಹಾಗೇ ಶಾಂತವಾಗಿ ನೆರಳುಕೊಡುತ್ತ ನಿಂತದ್ದ ಕಂಡು ಉಲ್ಲಾಸಗೊಂಡು ಅದರ ನೆರಳಿನಲ್ಲಿ ಸಣ್ಣ ನಿದ್ದೆ ಮಾಡಬೇಕೆನಿಸಿ ಕಾಲು ಚಾಚಿ ಮಲಗುತ್ತಾನೆ. ಎದ್ದಾಗ ಎದುರಿಗೊಬ್ಬ ಪುಟ್ಟ ಹುಡುಗಿ, ಆಕರ್ಷಕ ಕಣ್ಣುಗಳು. ಹೆಸರು ಕೇಳಿದರೆ 'ಜೀವಾ' ಎಂದು ತೊದಲುತ್ತಾಳೆ. ಇವನಿಗೆ ಅವಳನ್ನೆಲ್ಲೋ ನೋಡಿದ ಅನುಭವ. ಆ ಕಣ್ಣುಗಳನ್ನು, ಅದರ ತಂಪನ್ನು ಬಹಳ ಕಾಲ ಸವಿದ ಅನಿಸಿಕೆ. ಅಷ್ಟರಲ್ಲಿ ಅಲ್ಲಿಗೆ ಬಂದ ಹಳ್ಳಿಗ ಹೇಳುತ್ತಾನೆ – ಈಕೆ ದೇವಿಯ ಮಗಳು! ಕಥಾನಾಯಕ ದಢಕ್ಕನೆ ಎದ್ದು ಕೂರುತ್ತಾನೆ. 'ದೇವಿ' ತಾನು ಪ್ರೀತಿಸಿದ ಹೆಣ್ಣು! ಜೀವಾ ಆಕೆಯ ಮಗಳು! ಅಂದರೆ ತನ್ನ ಮಗಳೂ

